# ಅಮೃತ ವಚನಗಳು – 2

## ಸ್ವಾಮಿ ಭೂತೇಶಾನಂದಜಿಯವರೊಂದಿಗೆ ಸಂಭಾಷಣೆ

ಕನ್ನಡಕ್ಕೆ : ಸ್ವಾಮಿ ಮಂಗಳಾತ್ಮಾನಂದ



**ಪ್ರಶ್ನೆ:** ವೈಷ್ಣವರು ಸಖ್ಯ , ದಾಸ್ಯ , ಮಧುರ ಭಾವಗಳನ್ನು ಅವಲಂಬಿಸಿ ಏಕೆ ಸಾಧನೆ ಮಾಡುತ್ತಾರೆ?

**ಸ್ವಾಮೀಜಿ :** ಸಖ್ಯ, ದಾಸ್ಯ, ಮಧುರಭಾವಗಳಲ್ಲಿ ಒಂದು ಮಾನವೀಯ ಸಂಬಂಧ ಇದೆ. ವೈಷ್ಣವರು ಭಗವಂತನೊಡನೆ ವಿವಿಧ ಮಾನವೀಯ ಸಂಬಂಧಗಳನ್ನು ಇಟ್ಟುಕೊಂಡು ಸಾಧನೆ ಮಾಡುತ್ತಾರೆ. ಇದರಿಂದ ಭಕ್ತನಿಗೆ ಭಗವಂತನೊಡನೆ ಒಂದು ಸಹಜವಾದ ಬೋಧೆ ಬರುತ್ತದೆ. ಅವನು ಭಗವಂತ, ನಾನು ಆತನ ಭಕ್ತ – ಈ ಭಾವಕ್ಕೆ ಶಾಂತಭಾವ ಎನ್ನುವರು.

**ಪ್ರಶ್ನೆ:** ಸಾಧನೆ ಮಾಡುತ್ತ ಮಾಡುತ್ತ ಎಲ್ಲರಿಗೂ ದಿವ್ಯದೃಷ್ಟಿ ಬರುತ್ತದೆಯೆ? ಭಗವಂತನು ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸುತ್ತಾನೆ ತಾನೆ ?

**ಸ್ವಾಮೀಜಿ :** ಹೌದು, ನಿನ್ನ ಮೇಲೆ ಅವನ ಕೃಪೆ ಆದರೆ ಆಗೇ ಆಗುತ್ತದೆ. ಈಶ್ವರನ ಕುರಿತು ತೀವ್ರವಾದ ವ್ಯಾಕುಲತೆ ಬೆಳೆಸ ಬೇಕು. ವ್ಯಾಕುಲತೆ ತೀವ್ರವಾದರೆ ಅವನು ನಿನ್ನನ್ನು ಸರಿಯಾದ ದಾರಿಯಲ್ಲಿ ನಡೆಸಿಯೇ ನಡೆಸುತ್ತಾನೆ.

**ಪ್ರಶ್ನೆ:** ಶಾಂತ ಭಾವದಲ್ಲಿ ಯಾರು ಸಾಧನೆ ಮಾಡಿದ್ದಾರೆ?

**ಸ್ವಾಮೀಜಿ :** ನಾರದ ಮಹರ್ಷಿಗಳು ಶಾಂತ ಭಾವದಲ್ಲಿ ಸಾಧನೆ ಮಾಡಿದ್ದರು. ಹನುಮಂತನು ದಾಸ್ಯಭಾವದಲ್ಲಿ ಸಾಧನೆ ಮಾಡಿದ್ದ. ವ್ರಜಬಾಲಕರು ಅಂದರೆ ಗೋಪಾಲಕರು ಶ್ರೀಕೃಷ್ಣ ನೊಡನೆ ಸಖ್ಯಭಾವದಲ್ಲಿ, ಶ್ರೀಕೃಷ್ಣನ ತಂದೆ ತಾಯಿ ಅಥವಾ ಪಾಲಕ ನಂದ-ಯಶೋದೆಯರು ಭಗವಂತನೊಡನೆ ವಾತ್ಸಲ್ಯ ಭಾವದಲ್ಲಿ, ರಾಧೆ ಇತ್ಯಾದಿ ಗೋಪಿಕಾಸ್ತ್ರೀಯರು ಮಧುರ ಭಾವದಲ್ಲಿ ಸಾಧನೆ ಮಾಡಿದ್ದರು.

**ಕೇವಲೇನ ಹಿ ಭಾವೇನ ಗೋಪ್ಯೋ ಗಾವೋ ನಗಾ ಮೃಗಾಃ ।**
**ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾಃ ಮಾಮೀಯುರಂಜಸಾ ॥**

*(ಉದ್ಧವಗೀತೆ ೧೨.೮)*

ಶ್ರೀ ಕೃಷ್ಣನು ಹೇಳುತ್ತಾನೆ – 'ಕೇವಲ ಅನುರಾಗದಿಂದ ವ್ರಜ ಗೋಪಿಯರು, ಗೋಸಂಕುಲ, ಯಮಳಾರ್ಜುನ ವೃಕ್ಷ ಸಂಕುಲ, ಹರಿಣಾದಿ ಪ್ರಾಣಿಗಳು, ಕಾಲೀಯ ಇತ್ಯಾದಿ ನಾಗಗಳು ಹೀಗೆ ಅನೇಕ ಅಲ್ಪಬುದ್ಧಿಯ ಪ್ರಾಣಿಗಳು ಕೃತಾರ್ಥವಾಗಿ ನನ್ನನ್ನೇ ಹೊಂದಿದ್ದರು.'

**ಪ್ರಶ್ನೆ:** ಸಾಧನೆಯನ್ನು ಹೇಗೆ ಮಾಡಲಿ ಮಹಾರಾಜ್ ?

**ಸ್ವಾಮೀಜಿ :** ನಿಯಮಿತವಾಗಿ ಜಪ ಮಾಡುತ್ತಿರು, ನಿರಂತರ ಭಗವದ್ವಿಚಾರಗಳನ್ನು ಮನನ ಮಾಡುತ್ತಿರು. ಚಂಚಲವಾದ ಮನಸ್ಸನ್ನು ಜಪಮಾಡಿ ಸ್ಥಿರಗೊಳಿಸಲು ಸಾಧ್ಯ. ಜಪವು ಯಾಂತ್ರಿಕ ವಾಗದೆ, ಈಶ್ವರನನ್ನು ಮನಸ್ಸಿನಲ್ಲಿ ಚಿಂತಿಸುತ್ತ ಜಪ ಮಾಡು ತ್ತಿರಬೇಕು. ಭಗವಂತನನ್ನು ತನ್ನ ಆಪ್ತ ಎಂದು ಮನಸ್ಸಿಟ್ಟು, ಅವನ ನಾಮಾಮೃತದಲ್ಲಿ ಸಿಗುವ ರಸವನ್ನು ಸಾಧಿಸುತ್ತ ಜಪ ಮಾಡುತ್ತಿದ್ದರೆ ತನ್ನಿಂದ ತಾನೇ ಸರಿ ಹೋಗುತ್ತದೆ. ಜಪ ಧ್ಯಾನ, ಸತ್ಸಂಗ, ಸದ್ಗ್ರಂಥವಾಚನ – ಇವುಗಳನ್ನೆಲ್ಲ ಮಾಡುತ್ತಿರಬೇಕು. ಈ ದಿನವನ್ನು ಹೇಗೆ ಕಳೆಯಬೇಕೆಂದು ಮನಸ್ಸಿನಲ್ಲಿಯೇ ಚಿಂತಿಸ ಬೇಕು. ನಾಳಿನದ್ದು ತಾನಾಗಿಯೇ ಸರಿ ಹೋಗುತ್ತದೆ. ಈಗ ಏನು ಸಾಧನೆ-ಭಜನೆ ಮಾಡುತ್ತಿದ್ದೀರೊ, ಅದಕ್ಕಿಂತಲೂ ಇನ್ನು ಹೆಚ್ಚು ಸಾಧನೆ ಮಾಡಬೇಕು ಎನ್ನುವುದನ್ನು ಮನಸ್ಸಿನಲ್ಲಿಡು. ಆತ್ಮ ತೃಪ್ತಿ ಬಂದರೆ ಸಾಕು. ಜಪ, ಸತ್ಸಂಗ, ಸತ್‌ಚಿಂತನೆ, ಸದ್ಗ್ರಂಥಗಳ ಓದು ಇತ್ಯಾದಿ ವಿವಿಧ ಭಾವಗಳನ್ನು ಅವಲಂಬಿಸಿಕೊಂಡು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯಬೇಕು. ದಿನಾ ಒಂದೇ ತರದ ತಿಂಡಿ ರುಚಿಸುತ್ತದೆಯೆ? ಒಂದೇ ರುಚಿಯಿಂದ ಬೇಸರ ಬರು ತ್ತದೆ; ಅದಕ್ಕಾಗಿ ನೀವು ವಿವಿಧ ತರದ ತಿಂಡಿಗಳನ್ನು ತಿನ್ನುತ್ತೀರಿ. ಅದೇ ರೀತಿ ಆಧ್ಯಾತ್ಮಿಕ ಜೀವನದಲ್ಲಿ ಈಗ ಹೇಳಿದ ಹಾಗೆ ಪ್ರಯೋಗ ಮಾಡಬೇಕು.

ಮುತ್ತಿನ ಹುಳು ತನ್ನ ಚಿಪ್ಪನ್ನು ತೆರೆದು ಸ್ವಾತಿ ನಕ್ಷತ್ರದ ಮಳೆಯ ಒಂದು ಹನಿಗಾಗಿ ಕಾಯುತ್ತಿರುತ್ತದೆ. ಒಂದು ಹನಿ ಸಿಕ್ಕಿದ ಕೂಡಲೆ ಯಾರ ಗಮನಕ್ಕೂ ಬಾರದೆ, ಅದು ಸಮುದ್ರದ ತಳಭಾಗ ಸೇರುತ್ತದೆ. ಅಲ್ಲಿ ನಿರ್ಜನ ವಾಸದಲ್ಲಿ ಅದು ಮುತ್ತನ್ನು ತಯಾರಿಸುತ್ತದೆ – ಇದನ್ನು ಶ್ರೀರಾಮಕೃಷ್ಣರು 'ವಚನವೇದ' ದಲ್ಲಿ ಹೇಳಿದ್ದಾರೆ.

ಮುತ್ತಿನ ತಯಾರಿ ಎಂದರೆ ಏನು – ಭಗವಂತನ ತತ್ತ್ವದ ಸಾರವನ್ನು ಗ್ರಹಣ ಮಾಡುವುದು. ಭಗವಂತನನ್ನು ಪ್ರಾರ್ಥಿಸಿ ಸಾರ ವಸ್ತುವನ್ನು ಗಿಟ್ಟಿಸಿಕೊಳ್ಳಬೇಕು. ಅರ್ಥಾತ್ ಎಷ್ಟೋ ಪುಸ್ತಕ

ಗಳನ್ನು ಸಂಗ್ರಹಿಸುವುದರಿಂದ ಯಾವುದೇ ಪ್ರಯೋಜನವಿಲ್ಲ; ನಿಮಗೆಷ್ಟು ಬೇಕೋ ಅಷ್ಟರಲ್ಲಿಯೇ ಮನಸ್ಸನ್ನು ಏಕಾಗ್ರಮಾಡಿ – ಆ ಸಾರ ವಸ್ತುವನ್ನು ಜೀವನದಲ್ಲಿ ಪ್ರಕಾಶಕ್ಕೆ ತರಬೇಕು.

**ಪ್ರಶ್ನೆ:** ಭಕ್ತಿಯಲ್ಲಿ ರಜಸ್ ಮತ್ತು ತಮಸ್ ಎಂದರೇನು?

**ಸ್ವಾಮೀಜಿ :** ಪರಮಹಂಸರು ಇದನ್ನು ಸುಂದರವಾಗಿ ವ್ಯಾಖ್ಯಾನಿಸಿದ್ದಾರೆ. ತಮೋಭಕ್ತಿ ಎಂದರೆ ಹೊಡೆ-ಬಡಿ-ಕಡಿ-ಲೂಟಿಮಾಡು ಅರ್ಥಾತ್ ಆಧ್ಯಾತ್ಮಿಕ ಸಂಪತ್ತನ್ನು ಅರಿತು ಸ್ವೀಕರಿಸುವುದು. ರಜೋಭಕ್ತಿ ಎಂದರೆ–ಭಕ್ತನು ರೇಷ್ಮೆ ಜರತಾರಿಯ ಧೋತಿ ಉಡುವುದು, ಕುತ್ತಿಗೆಯಲ್ಲಿ ಕೆಲವು ಚಿನ್ನದ ರುದ್ರಾಕ್ಷಿ ಮಾಲೆಗಳನ್ನು ಧರಿಸುವುದು–ಅಂದರೆ ಬಾಹ್ಯ ಆಡಂಬರ ಇರುತ್ತದೆ. ಸತ್ತ್ವವು ಆಂತರ್ಯದಿಂದ ಬರುತ್ತದೆ. ಆಂತರ್ಯದಿಂದ ಈ ಸತ್ವವು ವೃದ್ಧಿಸಿದರೆ, ಆಗ ಯಾವ ಬಾಹ್ಯಾಡಂಬರಗಳೂ ಇರುವುದಿಲ್ಲ. ಶ್ರೀರಾಮಕೃಷ್ಣರು ಇದನ್ನು ವ್ಯಾಖ್ಯಾನಿಸಿದ್ದಾರೆ. ಆದರೆ ಅರ್ಥಮಾಡಿಕೊಳ್ಳುವುದು ಸುಲಭವಲ್ಲ. 'ಶ್ರೀರಾಮಕೃಷ್ಣ ವಚನವೇದ'ದಲ್ಲಿದೆ – ತಮೋಭಕ್ತಿ ಯಾರಲ್ಲಿರುತ್ತದೋ ಅವರ ವಿಶ್ವಾಸ ಬಹಳ ದೃಢವಾಗಿರುತ್ತದೆ. ಅವರು ಈಶ್ವರನಲ್ಲಿ ಜಗಳ ಮಾಡಿ ಪಡೆಯುತ್ತಾರೆ. ಇದು ಕೂಡ ಒಂದು ಭಾವ. ರಾಜಸಿಕ ಭಕ್ತನು ತಿಲಕಧಾರಣೆ, ಚಿನ್ನದ ಮಣಿಗಳ ರುದ್ರಾಕ್ಷಿ, ರೇಷ್ಮೆ ಜರತಾರಿ ಧೋತಿ ಇವುಗಳಿಂದ ಶೋಭಿತನಾಗಿ ಪೂಜೆ ಮಾಡುತ್ತಾನೆ. ಸಾತ್ತ್ವಿಕ ಭಕ್ತನು ಗೋಪ್ಯವಾದ ಜಾಗದಲ್ಲಿ ಕುಳಿತು ಧ್ಯಾನ ಮಾಡುತ್ತಾನೆ. ಆತ ಕೆಲವು ಸಲ ಸೊಳ್ಳೆಪರದೆಯೊಳಗೆ ಕೂತು ಭಗವಚ್ಚಿಂತನೆ ಮಾಡುತ್ತಿರುತ್ತಾನೆ. ಸಾಮಾನ್ಯ ಜನ ಭಾವಿಸುತ್ತಾರೆ; ಬಹುಶಃ ರಾತ್ರಿ ಆತ ಸರಿಯಾಗಿ ನಿದ್ದೆ ಮಾಡಿಲ್ಲ, ಅದಕ್ಕಾಗಿ ಎದ್ದಿಲ್ಲ ಎಂದು.

**ಪ್ರಶ್ನೆ:** ಭಕ್ತಿಯ ಅಹಂಕಾರ ಎಂದರೇನು?

**ಸ್ವಾಮೀಜಿ :** ನಾನು ಭಗವಂತನ ಭಕ್ತ – ಇದು ಭಕ್ತನ ಅಹಂಕಾರ. ಇಂತಹ ಅಹಂಕಾರ ಇದ್ದರೆ ಉತ್ತಮ.

**ಪ್ರಶ್ನೆ:** ಭಕ್ತರಲ್ಲಿ ಭಕ್ತಿಯ ಐಶ್ವರ್ಯ ಇರುತ್ತದೆಯೆ ?

**ಸ್ವಾಮೀಜಿ :** ವಿಷಯ ವಸ್ತುಗಳಿಂದ ನಿರ್ಲಿಪ್ತನಾಗುವುದು, ಭಗವಂತನ ನಾಮ ಸ್ಮರಣೆಯಲ್ಲಿ ಮಗ್ನನಾಗುವುದು – ಇವು ಭಕ್ತಿಯ ಐಶ್ವರ್ಯಗಳು.

**ಪ್ರಶ್ನೆ:** 'ನಾರದೀಯ ಭಕ್ತಿ' ಎಂಬುದರ ಅರ್ಥವೇನು?

**ಸ್ವಾಮೀಜಿ :** 'ನಾರದೀಯ ಭಕ್ತಿ' ಎಂದರೆ ನಿಷ್ಕಾಮ ಭಕ್ತಿ. ನಾರದೀಯ ಭಕ್ತಿ ಮತ್ತು ಶುದ್ಧ ಭಕ್ತಿ ಒಂದೇ. ಈ ಭಕ್ತಿಯಲ್ಲಿ ಯಾವುದೇ ಕಾಮನೆಗಳಿರುವುದಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು – ಶ್ರೀರಾಮಚಂದ್ರನು ನಾರದ ಮಹರ್ಷಿಗೆ ಏನಾದರೂ ವರವನ್ನು ಕೇಳು ಎಂದಾಗ ಮಹರ್ಷಿ ಹೇಳಿದರು, ''ಶ್ರೀರಾಮ, ನನಗೆ ಇನ್ನೇನು ಬೇಕು? ಆದರೂ ನೀನು ವರವನ್ನು ಕೊಡಲೇಬೇಕೆಂದಿದ್ದರೆ – ನಿನ್ನ ಪಾದಪದ್ಮಗಳಲ್ಲಿ ಶುದ್ಧ ಭಕ್ತಿಯನ್ನು ದಯಪಾಲಿಸು. ನಿನ್ನ ಭುವನ ಮೋಹಿನಿ ಮಾಯೆಯಿಂದ ನನ್ನನ್ನು ಮುಗ್ಧಗೊಳಿಸಬೇಡ.'' (ವಚನವೇದ)

**ಪ್ರಶ್ನೆ:** 'ಏಕ ಭಕ್ತಿ' ಎಂಬುದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು?

**ಸ್ವಾಮೀಜಿ :** ಮನಸ್ಸನ್ನು ಏಕಮುಖ ಮಾಡಿ, ಒಂದರ ಮೇಲೆ ಇಡುವ ನಿಷ್ಠೆ. ಒಬ್ಬ ಅಸಾಮಾನ್ಯ ವ್ಯಕ್ತಿ ಮಾತ್ರ ಬರಿ ಭಗವಂತನ ಮೇಲೆ ಮನಸ್ಸನ್ನಿಡುತ್ತಾನೆ. ಜನಸಾಮಾನ್ಯರ ಮನಸ್ಸು ನಾಲ್ಕು ದಿಕ್ಕುಗಳತ್ತ ಓಡಾಡುತ್ತಿರುತ್ತದೆ: ಒಂದು ಸಲ ಭಗವಂತನ ಮೇಲೆ ಇದ್ದರೆ, ಇನ್ನೊಂದು ಸಲ ಹತ್ತಾರು ಕಡೆ ವಿಷಯ ವಸ್ತುಗಳ ಬಗ್ಗೆ ಯೋಚನೆ ಮಾಡುತ್ತಾನೆ. ಅವನಿಗೆ ಭಗವಂತನ ಮೇಲೆ ದೃಢವಾಗಿ ಮನಸ್ಸನ್ನಿಡಲು ಸಾಧ್ಯವಾಗುವುದಿಲ್ಲ.

**ಪ್ರಶ್ನೆ:** ಪಕ್ವವಾದ ಭಕ್ತಿ ಮತ್ತು ವಿಜ್ಞಾನ ಎಂದರೇನು?

**ಸ್ವಾಮೀಜಿ :** ಭಕ್ತಿಯು ಪಕ್ವ (ಪರಿಪೂರ್ಣ) ಆಯಿತೆಂದರೆ, ಆತನಿಗಿನ್ನು ಭೇದ ಇರುವುದಿಲ್ಲ. ಪಕ್ವವಾದ ಭಕ್ತಿ ಉಂಟಾಯಿತೆಂದರೆ ಅದುವೇ ವಿಜ್ಞಾನ. ಯಾರಿಗೆ ವಿಜ್ಞಾನ ಲಭಿಸಿದೆಯೋ, ಆತ ಎಲ್ಲ ಕಡೆಯೂ ಭಗವಂತನನ್ನೇ ನೋಡುತ್ತಾನೆ. ಇಲ್ಲಿ ವಿಜ್ಞಾನ ಎಂದರೆ ಆಂಗ್ಲಭಾಷೆಯ Science ಅಲ್ಲ, ಭಗವಂತನನ್ನು ಸರ್ವವ್ಯಾಪಿಯಾಗಿ ಕಾಣುವುದು. ಇಂತಹ ವಿಶೇಷ ಜ್ಞಾನಕ್ಕೆ ವಿಜ್ಞಾನ ಎನ್ನುವರು.

**ಪ್ರಶ್ನೆ:** ಭಕ್ತಿಯು ಹೇಗೆ ಸಿದ್ಧಿಸುತ್ತದೆ, ಸ್ವಾಮೀಜಿ?

**ಸ್ವಾಮೀಜಿ :** ಭಕ್ತಿ ಮಾಡುತ್ತ ಹೋದಂತೆ ಭಕ್ತಿಯು ವೃದ್ಧಿಸುತ್ತದೆ. ಭಕ್ತಿಯು ವೃದ್ಧಿಸುವಂತೆ ಮಾಡಲು ಭಕ್ತರ ಸಂಗ ಮಾಡಬೇಕು. ತನ್ನ ಜೀವನವನ್ನು ಪವಿತ್ರವಾಗಿಡಬೇಕು. ಭಗವಂತನ ನಾಮ ಸಂಕೀರ್ತನೆ ಮಾಡಬೇಕು. ಹೀಗೆ ಮಾಡುತ್ತಿದ್ದರೆ ಈಶ್ವರ ಲಾಭವಾಗಲು ಸಾಧ್ಯ. ಆತನನ್ನು ಪ್ರಾರ್ಥಿಸಬೇಕು, ಮನಸ್ಸಿನೊಂದಿಗೆ ಸಂಗ್ರಾಮ ಮಾಡಬೇಕು; ಹಾಗೆ ಮಾಡುತ್ತಿದ್ದರೆ ಭಗವಂತನನ್ನು ಕುರಿತು ಮನಸ್ಸು ಸ್ಥಿರವಾಗುತ್ತದೆ.

ಭಕ್ತಿಯ ಲಾಭಕ್ಕಾಗಿ ಭಗವಂತನ ಗುಣಗಾನ, ನಿರ್ಜನವಾಸ, ಸಾಧುಸಂತರ ಸಹವಾಸ ಮತ್ತು ಭಗವತ್ತತ್ತ್ವ ಚಿಂತನೆ ಮಾಡಬೇಕು. ಭಾಗವತದಲ್ಲಿ ಒಂದು ಸುಂದರವಾದ ಶ್ಲೋಕವಿದೆ.

**ಮಲ್ಲಿಂಗ-ಮದ್ಭಕ್ತಜನ ದರ್ಶನಸ್ಪರ್ಶನಾರ್ಚನಮ್ ।**
**ಪರಿಚರ್ಯಾ ಸ್ತುತಿಃ ಪ್ರಹ್ವ-ಗುಣಕರ್ಮಾನುಕೀರ್ತನಮ್ ॥**

*(ಉದ್ಧವಗೀತಾ, ೧೧.೩೪)*

'ಭಗವಂತನ ಮೂರ್ತಿ ಪೂಜೆ ಮಾಡು, ಆತನ ಭಕ್ತರ ದರ್ಶನ, ಸ್ಪರ್ಶನ ಮಾಡು. ಹೀಗೆ ಮಾಡಿದಲ್ಲಿ ಭಕ್ತರ ಭಕ್ತಿ ವೃದ್ಧಿಸುತ್ತದೆ.' ಭಾಗವತದಲ್ಲಿ ಇಂತಹ ಅನೇಕ ಸತ್ಕರ್ಮಗಳ ಉಲ್ಲೇಖವಿದೆ. ಈ ಸತ್ಕರ್ಮಗಳ ಮೂಲಕ ಭಕ್ತನ ಭಕ್ತಿ ವೃದ್ಧಿಸುತ್ತದೆ. ❃